ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಛೇರಿಗಳಿಗೆ ಸ್ಥಳಾವಕಾಶವನ್ನು ಹೊಸದಾಗಿ ನಿರ್ಮಾಣವಾಗುತ್ತಿರುವ ಕೇಂದ್ರ ಕಛೇರಿಯ 'ವಾರ್ತಾ ಭವನ' ದಲ್ಲಿ ಸ್ಥಳಾವಕಾಶ ಕಲ್ಪಿಸಲಾಗುವುದು.

ಇ) ಪತ್ರಿಕಾ ಮಾಧ್ಯಮವನ್ನು ಹೆಚ್ಚಿಚ್ಚು ರಚನಾತ್ಮಕವಾಗಿ ಮಾಡುವುದು ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ಉತ್ತಮ ಸಂದೇಶ ನೀಡಲು ಸರ್ಕಾರದ ಪ್ರಯತ್ನ ಯಾವಾಗಲೂ ಇರುತ್ತದೆ.

ರಾಜ್ಯದಲ್ಲಿ ಅಧ್ಯಾಪಕರುಗಳಿಗೆ ಫೀಡರ್ ಕೇಡರ್ ಹಾಗೂ ಸವಲತ್ತುಗಳನ್ನು ಒದಗಿಸುವುದು

2058(2007) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್. (ಚಾಮರಾಜ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಕೇಂದ್ರೀಯ ಧನಸಹಾಯ ಆಯೋಗದ ಶಿಫಾರಸ್ಸಿನ ಕ್ಯಾರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂಗಳನ್ನು ಜಾರಿಗೊಳಿಸಲಾಗಿದೆಯೇ; ಹೌದಾದರೆ, ಎಂದಿನಿಂದ ;

ಆ) ಅದರಲ್ಲಿ ಇರುವ ಫೀಡರ್ ಕೇಡರ್ ಸಹಿತ ಎಲ್ಲಾ ಸವಲತ್ತುಗಳನ್ನು ಅಧ್ಯಾಪಕರುಗಳಿಗೆ ನೀಡಿದೆಯೇ; ಕೊಟ್ಟಿದ್ದಲ್ಲಿ, ವಿವರ ನೀಡುವುದು;

ಇ) ಇಲ್ಲದಿದ್ದಲ್ಲಿ, ಕಾರಣಗಳೇನು; ಕೇಂದ್ರೀಯ ಧನಸಹಾಯ ಆಯೋಗದ ಶಿಫಾರಸ್ಸಿನಂತೆ ಫೀಡರ್ ಕೇಡರ್ ಸಹಿತ ಎಲ್ಲಾ ಸವಲತ್ತುಗಳನ್ನು ಅಧ್ಯಾಪಕರುಗಳಿಗೆ ನೀಡುವ ವಿಚಾರದಲ್ಲಿ ಸಂಬಂಧಿಸಿದ ಕುಲಪತಿಗಳಿಗೆ ಸೂಚನೆ ನೀಡಬೇಕೆಂಬ ಬಗ್ಗೆ ಸರ್ಕಾರದ ನಿಲುವೇನು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) ಹೌದು.

ದಿನಾಂಕ: 1-1-1986 ರಿಂದ

ಪರಿಷ್ಕೃತ ದಿನಾಂಕ : 1-1-1996 ರಿಂದ

ಆ) ದಿನಾಂಕ: 8-8-2000 ಸಂಖ್ಯೆ: ಇಡಿ 100 ಯುಎನ್‌ಇ 2000ರ ಸರ್ಕಾರಿ ಆದೇಶದಲ್ಲಿ ತಿದ್ದುಪಡಿಯಾದಂತೆ, ದಿನಾಂಕ: 15-11-1999 ಸಂಖ್ಯೆ: ಇಡಿ 100 ಯುಎನ್‌ಇ 1999ರ ಸರ್ಕಾರಿ ಆದೇಶದಲ್ಲಿ ಅಳವಡಿಸಿಕೊಂಡ ಯುಜಿಸಿ ಪ್ಯಾಕೇಜ್‌ನಂತೆ ಎಲ್ಲಾ ಸವಲತ್ತುಗಳನ್ನು ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶಿವಮೊಗ್ಗದ ಬಾಪೂಜಿ ಆಯುರ್ವೇದಿಕ್ ಆಸ್ಪತ್ರೆ ಮತ್ತು ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ

2059(2559) ಶ್ರೀ ಶಾಂತನ ಗೌಡ ಡಿ.ಜಿ. (ಹೊನ್ನಾಳಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗದ ಬಾಪೂಜಿ ಆಯುರ್ವೇದಿಕ್ ಆಸ್ಪತ್ರೆ ಮತ್ತು ಕಾಲೇಜಿಗೆ ಮಂಜೂರಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಈಗ ಸೇರ್ಪಡೆ ಆಗಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಆ) ಸರ್ಕಾರದ ನಿಯಮದಂತೆ ಈ ಸಂಸ್ಥೆಯಲ್ಲಿ ಉಪನ್ಯಾಸಕರು ಇರುವರೇ; ಹಾಗೂ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಆಸ್ಪತ್ರೆಯಲ್ಲಿ ಸೌಲಭ್ಯ ಇದೆಯೇ;